O.S.76/2017 PW-1

ದಿನಾಂಕಃ 07.04.2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

ಲಕ್ಷ್ಮಕ್ಕ ನನ್ನ ಹೆಂಡತಿ ಎಂದರೆ ಸರಿ. ದಾವಾ ಸ್ವತ್ತು ನನ್ನ ಹೆಂಡತಿಗೆ ದಿಃ22.11.2003 ರಂದು ಸರ್ಕಾರದ ಆದೇಶದಂತೆ ಮಂಜೂರಾಗಿರುತ್ತದೆ ಹಾಗೂ ಅದರಂತೆ ಸಾಗುವಳಿ ಚೀಟಿಯನ್ನು ಪಡೆದಿರುತ್ತೇವೆ. ಸರ್ವೆ ನಂ.64 ರ ಒಟ್ಟು ವಿಸ್ತಿರ್ಣ 10 ಎಕರೆ 39 ಗುಂಟೆ ಇರುತ್ತದೆ. ಸದರಿ ಜಮೀನು ಸರ್ಕಾರದ ಜಮೀನು ಎಂದರೆ ಸರಿ. ಪ್ರತಿವಾದಿಗಳು ದಾವಾ ಸ್ವತ್ತಿನಲ್ಲಿ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ಸದರಿ ಜಮೀನಿನಲ್ಲಿ ಲಕ್ಷ್ಮಕ್ಕ ರವರಿಗೆ 2 ಎಕರೆ ಜಮೀನು ಮಂಜೂರಾಗಿರುತ್ತದೆ. ಮಂಜೂರು ಮಾಡುವ ಮುನ್ನ ಸ್ಕೆಚ್ ಅನ್ನು ಮಾಡುತ್ತಾರೆ ಎಂದರೆ ಸರಿ. ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ದಾವಾ ಸ್ವತ್ತಿನ ಪೂರ್ವಕ್ಕೆ-ಬ್ಲಾಕ್ ನಂ.4, ಪಶ್ಚಿಮಕ್ಕೆ-ಬ್ಲಾಕ್ ನಂ.1, ಉತ್ತರಕ್ಕೆ-ಬ್ಲಾಕ್ ನಂ.2 ಮತ್ತು ದಕ್ಷಿಣಕ್ಕೆ- ಹೊಸಹಳ್ಳಿಯ ಗಡಿ ಇರುತ್ತದೆ. ನಾನು ಸುಳ್ಳು ಚೆಕ್ಕು ಬಂಧಿಯನ್ನು ಹೇಳುತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಬಗ್ಗೆ OS.160/2009 ರ ದಾವೆಯು ವಾಜಾ ಆಗಿರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸದರಿ ದಾವೆಯ ಮೇಲೆ  ಮೇಲ್ಮನವಿ ಸಲ್ಲಿಸಿ, ಡಿಕ್ರಿಯಾಗಿರುತ್ತದೆ ಎಂದು ನುಡಿದಿರುತ್ತಾರೆ. ನನ್ನ ತಮ್ಮನ ಪರವಾಗಿ ನಾನು ಸಾಕ್ಷಿ ನುಡಿದಿರುತ್ತೇನೆ ಎಂದರೆ ಸರಿ. ನನ್ನ ಮತ್ತು ನನ್ನ ತಮ್ಮನ ಜಮೀನಿನ ಚೆಕ್ಕು ಬಂಧಿ ತಪ್ಪು ಆದ ಕಾರಣ ದಾವೆಯು ವಜಾ ಆಗಿರುತ್ತದೆ ಎಂದರೆ ಸರಿ. ತಪ್ಪು ದುರಸ್ತಿಯಾದ ಕಾರಣ ತುಮಕೂರಿನ ಡಿ.ಡಿ.ಎಲ್.ಆರ್ ರವರು ಜಮೀನಿನ ಸರ್ವೆ ನಂಬರ್ ಗಳನ್ನು ಒಟ್ಟುಗುರಡಿಸಿರುತ್ತಾರೆ ಎಂದರೆ ಸರಿ. ನಿಪಿ-8 ಪ್ರಕಾರ ಬ್ಲಾಕ್ ನಂ.1 ಮತ್ತು 4 ಯಾರಿಗೂ ಮಂಜೂರಾಗಿಲ್ಲ ಎಂದರೆ ಸರಿ. ಪ್ರತಿವಾದಿಯವರು ಮಂಜೂರಾತಿಗಾಗಿ ಅರ್ಜಿಯನ್ನು ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿಗಳು 4 ಎಕರೆ ಜಮೀನಿನಲ್ಲಿ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ.  ಸರ್ವೆ ನಂ.64 ರಲ್ಲಿ ಲಕ್ಷ್ಮಕ್ಕ, ಭೂತಣ್ಣ ಬಿನ್ ಎಡ್ಡಪ್ಪ  ಮತ್ತು ರಂಗಶಾಮಣ್ಣ ರವರು ಸ್ವಾಧೀನದಲ್ಲಿ ಇದ್ದಾರೆ, ಅವರನ್ನು ಹೊರತುಪಡಿಸಿ ಬೇರೆ ಯಾರೂ ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿ. ಪ್ರತಿವಾದಿಗಳು ನಮ್ಮ ಮೇಲೆ ದೂರನ್ನು ನೀಡಿದ್ದಾರೆ ಎಂದರೆ ಸರಿಯಲ್ಲ. ಪೊಲೀಸರು ನಮ್ಮಿಂದ ಹೇಳಿಕೆಯನ್ನು ಪಡೆದರು ಎಂದರೆ ಸರಿಯಲ್ಲ. 2 ಎಕರೆಯ ಜಮೀನನ್ನು ಹೊರತುಪಡಿಸಿ ಬೇರೆ ಜಮೀನಿಗೆ ನನ್ನ ತಕರಾರು ಇರುವುದಿಲ್ಲ ಎಂದರೆ ಸಾಕ್ಷಿಯು ಸರ್ವೆ ನಂ.64 ರಲ್ಲಿ ಮೂರು ಮಂಜೂರಾತಿಗಳನ್ನು ಬಟ್ಟು ಬೇರೆ ಯಾರೂ ಇಲ್ಲ ಎಂದು ನುಡಿದಿರುತ್ತಾರೆ. ಸರ್ವೆ.64 ರನ್ನು ಅಳತೆ ಮಾಡಲು ನನಗೆ ಯಾವುದೇ ತಕರಾರು ಇಲ್ಲ ಎಂದರೆ ಸರಿಯಲ್ಲ. ಹಕ್ಕು

ಪತ್ರದಲ್ಲಿ ಇರುವ ಚೆಕ್ಕು ಬಂಧಿ ಸರಿಯಾಗಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಪೂರ್ವಕ್ಕೆ ಪ್ರತಿವಾದಿ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಲಶದಿಂದ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ದಾವೆಯನ್ನು ಹೂಡಿ ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ.ಹೇ.ಕೇ.ಸರಿ.ಇದೆ.

ಸಹಿ/-

ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,

ಶಿರಾ.